# ಆಮಿಷಗಳ ಸುಳಿಯಲ್ಲಿ ವೈದ್ಯ

ವೈದ್ಯರಿಗೆ ದುಬಾರಿ ಉಡುಗೊರೆ, ವಿದೇಶ ಪ್ರವಾಸದ ಆಮಿಷ ಒಡ್ಡುವ ಔಷಧ ಕಂಪೆನಿಗಳಿಗೆ ಕಡಿವಾಣ ಹಾಕಲು ಇಂಡಿಯನ್ ಮೆಡಿಕಲ್ ಕೌನ್ಸಿಲ್ (ಐಎಂಸಿ) ತನ್ನ ಕೆಲವು ನಿಯಮಗಳಿಗೆ ತಿದ್ದುಪಡಿ ತಂದಿದೆ. ವೈದ್ಯರನ್ನು ನಿಯಂತ್ರಿಸುವುದು ಹೇಗೆ ಎಂಬುದು ಗೊತ್ತಾಗದ ಪರಿಸ್ಥಿತಿ ನಿರ್ಮಾಣವಾಗಿತ್ತು. ಅದೇನೇ ಇರಲಿ, ತಡವಾಗಿಯಾದರೂ ಐಎಂಸಿ ಎಚ್ಚೆತ್ತುಕೊಂಡಿದೆ. ತಮ್ಮ ಕಂಪೆನಿಯ ಔಷಧಗಳನ್ನೇ ರೋಗಿಗಳಿಗೆ ಶಿಫಾರಸು ಮಾಡುವಂತೆ ಕಂಪೆನಿಗಳ ಮಾರಾಟ ಪ್ರತಿನಿಧಿಗಳು ವೈದ್ಯರಿಗೆ ದುಂಬಾಲು ಬಿದ್ದು ಅವರ ವಿಶ್ವಾಸ ಗಳಿಸಲು ಸಣ್ಣಪುಟ್ಟ ಉಡುಗೊರೆ ಕೊಡುವ ಪದ್ಧತಿ ಬಹಳ ಹಿಂದಿನಿಂದ ರೂಢಿಯಲ್ಲಿದೆ. ಇತ್ತೀಚಿನ ದಿನಗಳಲ್ಲಿ ವೈದ್ಯರಿಗೆ ಭಾರೀ ಬೆಲೆಯ ಉಡುಗೊರೆ ಕೊಡುವುದು, ಅವರನ್ನು ಹಾಗೂ ಅವರ ಕುಟುಂಬದ ಸದಸ್ಯರನ್ನು ವಿದೇಶ ಪ್ರವಾಸಕ್ಕೆ ಕಳಿಸುವ ಮೂಲಕ ಅವರ ವಿಶ್ವಾಸ ಗಳಿಸುವ ಪ್ರಯತ್ನಗಳನ್ನು ಬಹುರಾಷ್ಟ್ರೀಯ ಔಷಧ ಕಂಪೆನಿಗಳು ಮಾಡುತ್ತಿವೆ. ಕೆಲವು ಕಂಪೆನಿಗಳು ಔಷಧ ಮಾರಾಟದಿಂದ ಬಂದ ಲಾಭದಲ್ಲಿ ಇಂತಿಷ್ಟು ಹಣವನ್ನು ಕಮಿಷನ್ ರೂಪದಲ್ಲಿ ವೈದ್ಯರಿಗೆ ನೀಡುತ್ತಿವೆ.

ಇದು ಮಾರಾಟ ತಂತ್ರ. ಆದರೆ ಇದೇ ಜಾಡಿನಲ್ಲಿ ದೇಶೀಯ ಔಷಧ ಕಂಪೆನಿಗಳೂ ಪೈಪೋಟಿಗೆ ಇಳಿಯಬೇಕಾದ ಪರಿಸ್ಥಿತಿ ನಿರ್ಮಾಣವಾಗಿದೆ. ದುಬಾರಿ ಉಡುಗೊರೆ, ವಿದೇಶ ಪ್ರವಾಸ, ಕಮಿಷನ್ ಇತ್ಯಾದಿಗಳು ಲಂಚದ ಇನ್ನೊಂದು ರೂಪಗಳು. ಆಮಿಷಗಳಿಗೆ ಒಳಗಾಗುವ ವೈದ್ಯರು ಬಹುರಾಷ್ಟ್ರೀಯ ಕಂಪೆನಿಗಳ ಔಷಧಗಳನ್ನೇ ಖರೀದಿಸಿ ಬಳಸುವಂತೆ ರೋಗಿಗಳಿಗೆ ಶಿಫಾರಸು ಮಾಡುತ್ತಾರೆ. ಇವುಗಳಿಗೆ ಪರ್ಯಾಯವಾದ ಕಡಿಮೆ ಬೆಲೆಯ ದೇಶಿ ಔಷಧಗಳು ಮಾರುಕಟ್ಟೆಯಲ್ಲಿ ಸಿಗುತ್ತಿದ್ದರೂ ಅವನ್ನು ಅಲಕ್ಷಿಸಲಾಗುತ್ತಿದೆ. ಇದರಿಂದಾಗಿ ಬಡ ರೋಗಿಗಳಿಗೆ ಚಿಕಿತ್ಸೆ ದುಬಾರಿಯಾಗಿದೆ. ದೇಶೀಯ ಔಷಧ ಕಂಪೆನಿಗಳು ಬಹುರಾಷ್ಟ್ರೀಯ ಕಂಪನಿಗಳ ಜತೆಯಲ್ಲಿ ಪೈಪೋಟಿ ನಡೆಸಲಾಗದೆ ಸೋಲುತ್ತಿವೆ. ಈ ಕೆಟ್ಟ ಪದ್ಧತಿಯನ್ನು ನಿಯಂತ್ರಿಸುವುದು ಸಾಧ್ಯವೇ ಇಲ್ಲ ಎನ್ನುವಂತಹ ಪರಿಸ್ಥಿತಿ ನಿರ್ಮಾಣವಾಗಿತ್ತು. ಆದರೆ ಐಎಂಸಿ ಈ ನಿಟ್ಟಿನಲ್ಲಿ ಉತ್ತಮ ಹೆಜ್ಜೆಗಳನ್ನು ಇಟ್ಟಿದೆ. ಔಷಧ ಕಂಪೆನಿಗಳ ಉಡುಗೊರೆಗಳನ್ನು ಪಡೆಯುವ ವೈದ್ಯರು ಸಹಜವಾಗಿಯೇ ಅವುಗಳಿಗೆ ನೆರವಾಗುವ ಮನಸ್ಥಿತಿಗೆ ಬಂದು ಬಿಡುತ್ತಾರೆ. ವಿದೇಶಗಳಲ್ಲಿ ನಿಷೇಧಕ್ಕೆ ಒಳಗಾದ ಔಷಧಗಳನ್ನು ಭಾರತದಲ್ಲಿ ಮಾರಾಟ ಮಾಡಲು ನಮ್ಮ ವೈದ್ಯರು ನೆರವಾಗುತ್ತಿದ್ದಾರೆ ಎಂಬ ಆರೋಪಗಳಿವೆ.

ಇಂಡಿಯನ್ ಮೆಡಿಕಲ್ ಕೌನ್ಸಿಲ್, ವೈದ್ಯರ ನಡವಳಿಕೆಗಳು ಹಾಗೂ ನೀತಿ ಸಂಹಿತೆಗಳಿಗೆ ಸಂಬಂಧಿಸಿದ ನಿಯಮಗಳಿಗೆ ತಂದಿರುವ ತಿದ್ದುಪಡಿಗಳಿಂದ ಇನ್ನು ಮುಂದೆ ವೈದ್ಯರು ಔಷಧ ಮಾರಾಟ ಪ್ರತಿನಿಧಿಗಳಿಂದ ಒಂದು ಸಣ್ಣ ಉಡುಗೊರೆಯನ್ನೂ ಪಡೆಯುವಂತಿಲ್ಲ. ಕಂಪೆನಿಗಳು ಸಂಘಟಿಸುವ ವಿದೇಶ ಪ್ರವಾಸಗಳಿಗೆ ಹೋಗುವಂತಿಲ್ಲ. ವಿದೇಶ ಪ್ರವಾಸ ವೈದ್ಯರ ಕುಟುಂಬ ಸದಸ್ಯರಿಗೂ ನಿಷಿದ್ಧ. ವೈದ್ಯಕೀಯ ಸಂಶೋಧನೆಗಾಗಿ ಪ್ರವಾಸ ಮಾಡಬೇಕಾದ ಸಂದರ್ಭಗಳಲ್ಲಿ ಐಎಂಸಿಯ ತಜ್ಞರ ಸಮಿತಿಯ ಅನುಮತಿ ಪಡೆಯುವುದು ಕಡ್ಡಾಯ. ವೈದ್ಯಕೀಯ ಸಂಶೋಧನಾ ಲೇಖನಗಳನ್ನು ಪ್ರಕಟಿಸುವಾಗ ಸಂಶೋಧನೆಗೆ ಆರ್ಥಿಕ ನೆರವು ನೀಡಿದ ಔಷಧ ಕಂಪೆನಿಗಳ ಹಿತಾಸಕ್ತಿ ಬಗ್ಗೆ ವೈದ್ಯರು ತಲೆಕೆಡಿಸಿಕೊಳ್ಳುವಂತಿಲ್ಲ. ಈ ನಿಯಮಗಳನ್ನು ಉಲ್ಲಂಘಿಸುವ ವೈದ್ಯರ ಪರವಾನಗಿಯನ್ನು ರದ್ದು ಪಡಿಸುವ ಅಧಿಕಾರ ಐಎಂಸಿಗೆ ಇದೆ. ಬದಲಾದ ನಿಯಮಗಳಿಂದ ವೈದ್ಯಕೀಯ ಸೇವಾ ವಲಯದಲ್ಲಿ ಬೇರು ಬಿಟ್ಟಿರುವ ಉಡುಗೊರೆ ಪದ್ಧತಿ ನಿವಾರಣೆ ಆಗಬಹುದು ಎಂದು ಜನರು ನಿರೀಕ್ಷಿಸಿದ್ದಾರೆ.

ಔಷಧ ಮಾರಾಟದ ಅವ್ಯವಹಾರಗಳನ್ನು ನಿಯಂತ್ರಿಸಿದರೆ ಸಾಲದು. ವೈದ್ಯಕೀಯ ಸೇವೆಗಳು ಬಡವರು ಮತ್ತು ಕೆಳಮಧ್ಯಮ ವರ್ಗದವರಿಗೆ ಗಗನ ಕುಸುಮವಾಗಿವೆ. ಸರ್ಕಾರಿ ಹಾಗೂ ಖಾಸಗಿ ವೈದ್ಯಕೀಯ ವಲಯದಲ್ಲಿ ರೋಗಿಗಳನ್ನು ಸುಲಿಗೆ ಮಾಡಲಾಗುತ್ತಿದೆ. ಸರ್ಕಾರಿ ಆಸ್ಪತ್ರೆಗಳ ಪರಿಸ್ಥಿತಿ ಅತ್ಯಂತ ಶೋಚನೀಯವಾಗಿದೆ. ಬಡ ರೋಗಿಗಳಿಗೆ ಸರ್ಕಾರ ಕೊಡುವ ಔಷಧಗಳು ಖಾಸಗಿ ಅಂಗಡಿಗಳ ಪಾಲಾಗುತ್ತಿವೆ. ಕೆಲವು ಸರ್ಕಾರಿ ವೈದ್ಯರು ಹಾಗೂ ಸಿಬ್ಬಂದಿ ಕೆಲಸದ ಅವಧಿಯಲ್ಲಿ ಖಾಸಗಿ ಆಸ್ಪತ್ರೆಗಳಲ್ಲಿ ದುಡಿಯುತ್ತಾರೆ. ಇದಕ್ಕೆ ಅಪವಾದ ಎನ್ನಿಸುವಂತಹ ಪ್ರಾಮಾಣಿಕ, ಕಾರ್ಯನಿಷ್ಠ ವೈದ್ಯರು ಇಲ್ಲವೆಂದಲ್ಲ. ಅಂಥವರು ವಿರಳ. ವೈದ್ಯಕೀಯ ಸೇವಾವಲಯ ಅವ್ಯವಹಾರಗಳಿಂದ ಮುಕ್ತವಾಗಿರಬೇಕು. ಮೆಡಿಕಲ್ ಕೌನ್ಸಿಲ್ ತನ್ನ ನಿಯಮಾವಳಿಗಳಿಗೆ ತಿದ್ದುಪಡಿ ತಂದರೆ ಸಾಲದು. ಅವುಗಳು ಪಾಲನೆ ಆಗುತ್ತಿವೆಯೇ ಎಂಬುದನ್ನೂ ಕಣ್ಣಲ್ಲಿ ಕಣ್ಣಿಟ್ಟು ಗಮನಿಸಬೇಕು. ನಿಯಮ ಉಲ್ಲಂಘಿಸುವ ವೈದ್ಯರ ಮೇಲೆ ನಿರ್ದಾಕ್ಷಿಣ್ಯ ಕ್ರಮಗಳನ್ನು ಜರುಗಿಸಲು ಹಿಂಜರಿಯಬಾರದು.

■ ಪ್ರೇಮಕುಮಾರ್ ಹರಿಯಬ್ಬೆ

**ಉಡುಗೊರೆ, ವಿದೇಶ ಪ್ರವಾಸ, ಕಮೀಷನ್ ಕೂಡ ಲಂಚದ ಇನ್ನೊಂದು ರೂಪ. ಆಮಿಷಗಳಿಗೆ ಒಳಗಾಗುವ ವೈದ್ಯರು ಬಹುರಾಷ್ಟ್ರೀಯ ಕಂಪೆನಿಗಳ ಔಷಧಗಳನ್ನೇ ಖರೀದಿಸುವಂತೆ ರೋಗಿಗಳಿಗೆ ಶಿಫಾರಸು ಮಾಡುತ್ತಾರೆ. ಕಡಿಮೆ ಬೆಲೆಯ ದೇಶಿ ಔಷಧಗಳು ಮಾರುಕಟ್ಟೆಯಲ್ಲಿ ಸಿಗುತ್ತಿದ್ದರೂ ಅವನ್ನು ಅಲಕ್ಷಿಸಲಾಗುತ್ತಿದೆ. ಇದರಿಂದಾಗಿ ಬಡ ರೋಗಿಗಳಿಗೆ ಚಿಕಿತ್ಸೆ ದುಬಾರಿಯಾಗಿದೆ.**

